ಮನೆಯ ಪ್ರಧಾನ ಬಾಗಿಲು ಪೂರ್ವಕ್ಕಿರಬೇಕೆಂಬ ಆಸೆಯಿತ್ತು. ಮೂರ್ನಾಲ್ಕು ಸೈಟ್‌ಗಳನ್ನು ನೋಡಿದೆವಾದರೂ ಯಾವುದೂ ಅಷ್ಟು ಸಮಾಧಾನ ನೀಡಲಿಲ್ಲ. ಒಂದು ಸೈಟ್ ರಾಜಕಾಲುವೆಯ ಹತ್ತಿರ ಇದ್ದರೆ, ಮತ್ತೊಂದು ಹಳ್ಳದಲ್ಲಿತ್ತು. ಇನ್ನೊಂದು ಸೈಟ್ ಇದ್ದ ರಸ್ತೆ ದಕ್ಷಿಣದಿಕ್ಕಿಗಿದ್ದರೆ, ಮಗದೊಂದು ವ್ಯಾಜ್ಯದ ಕಾರಣದಿಂದ ಕೋರ್ಟ್ ತೀರ್ಪಿನ ನಿರೀಕ್ಷೆಯಲ್ಲಿತ್ತು.

ಅಂತೂ ಇಂತೂ ಮನಸ್ಸಿಗೊಪ್ಪುವ, ಪ್ರಶಾಂತ ವಾತಾವರಣದಲ್ಲಿರುವ ಒಂದು ಸೈಟನ್ನು ನೋಡಿದೆವು. ಮನೆ ಬಾಗಿಲು ಪೂರ್ವದಿಕ್ಕಿಗೆ ಬರುವಂತೆ ಕಟ್ಟಬಹುದಾಗಿತ್ತಲ್ಲದೆ ಸುತ್ತಮುತ್ತ ನಾಲ್ಕಾರು ಮನೆಗಳೂ ಆಗಿದ್ದವು. ವಾಹನ ಸಂಚಾರವೂ ಅಷ್ಟಾಗಿ ಕಾಣಲಿಲ್ಲ. ಸೈಟ್‌ನ ಮಾಲೀಕರು ಕಾಂಪೌಂಡ್‌ಗೆ ಅಡಿಪಾಯವನ್ನೂ ಹಾಕಿಸಿದ್ದರು. ಸೈಟಿಗೆ ಮಾಲೀಕರು ಹೇಳುವ ಬೆಲೆ ನಮ್ಮ ಬಂಡವಾಳದ ಪರಿಮಿತಿಯಲ್ಲಿದ್ದು ನಮಗೇ ಸಿಕ್ಕಿದ್ದರೆ ಚೆನ್ನಾಗಿತ್ತು ಎಂದೆನಿಸಿತು. ಏಕೆಂದರೆ ಸೈಟನ್ನು ನೋಡಿದ ಕೂಡಲೇ ನನ್ನನ್ನು ಆಕರ್ಷಿಸಿದ್ದು ಸೈಟ್‌ನ ಮುಂಭಾಗದಲ್ಲಿದ್ದ ಆ ಮರ!... ಆ ಮರಕ್ಕೆ ಅದಾಗಲೇ ಸುಮಾರು ಹತ್ತು ವರ್ಷದ ಆಜುಬಾಜು. ಮನೆ ಮುಂದೆ ಒಂದು ಮರವಿದ್ದರೆ ಎಷ್ಟು ಚೆಂದ. ಅದರ ತಂಪಾದ ಗಾಳಿ, ನೆರಳು, ಅಲ್ಲಿ ನೆಲೆಸುವ–ಬರುವ ಹಕ್ಕಿಗಳು, ಮನೆಗೆ ಅದು ತರುವ ಶೋಭೆ ಇವನ್ನೆಲ್ಲಾ ನೆನೆಸಿಕೊಂಡೇ ಪುಳಕಿತಳಾಗಿದ್ದೆ. ಆ ಸೈಟ್ ನಮ್ಮದಾಗುತ್ತದೋ ಇಲ್ಲವೋ ಎಂಬ ಯೋಚನೆಯಲ್ಲೇ ಮನೆಗೆ (ಬಾಡಿಗೆ ಮನೆ) ಮರಳಿದೆವು.

ಬಾಲ್ಯದಿಂದಲೂ ಮಲೆನಾಡಿನ ಪರಿಸರದಲ್ಲಿ ಬೆಳೆದ ನಮಗೆ ಗಿಡ ಮರಗಳೆಂದರೆ ಬಹು ಪ್ರೀತಿ. ಹುಟ್ಟೂರಿನಲ್ಲಿ ಸುತ್ತಮುತ್ತ ಹಚ್ಚ ಹಸಿರು ಕಾಡು, ಹಕ್ಕಿಗಳ ಚಿಲಿಪಿಲಿ, ನದಿ–ಹಳ್ಳಗಳ ಜುಳುಜುಳು ನಿನಾದ, ಗದ್ದೆ ತೋಟ, ಕೊಟ್ಟಿಗೆಯ ತುಂಬಾ ಇರುತ್ತಿದ್ದ ಹಸು–ಎತ್ತು–ಎಮ್ಮೆ–ಕೋಣಗಳು, ವಿವಿಧ ರೀತಿಯ ಸಣ್ಣಪುಟ್ಟ ಪ್ರಾಣಿಗಳು, ಕೀಟಗಳು, ಸಂಜೆಯಾಗುತ್ತಿದ್ದಂತೆ 'ಝೀರ್... ಝೀರ್...' ಎನ್ನುವ ಜೀರುಂಡೆ... ಉದ್ಯೋಗದ ನಿಮಿತ್ತ ದೊಡ್ಡ ನಗರಕ್ಕೆ ಬಂದರೂ ಅಂದಿನ ದಿನಗಳೆಲ್ಲಾ ಕಾಡುವ ಸಿಹಿನೆನಪುಗಳು. ಇಂತಹುದರಲ್ಲಿ ನಮ್ಮದಾಗಲಿರುವ ಸೈಟ್‌ನ ಮುಂದೆ ಒಂದು ಮರವಿದೆಯೆಂದರೆ ಖುಷಿಯಾಗದೇ ಇದ್ದೀತೇ?

ಅಂತೂ ವಾರದೊಳಗೆ ಸೈಟ್ ನಮ್ಮದಾಯಿತು. ಸೈಟ್‌ನ ಮಾಲೀಕರು ವಿದೇಶಕ್ಕೆ ಹೋಗುವ ತರಾತುರಿಯಲ್ಲಿದ್ದುದರಿಂದ ಅಷ್ಟು ಬೇಗ ಇತ್ಯರ್ಥವಾಯಿತು. ಮನೆ ಕಟ್ಟಿಸಲು ಅನುಕೂಲವಾಗಲೆಂದು ಬಾಡಿಗೆ ಮನೆ ಹಿಡಿದು, ಮೊದಲಿದ್ದ ಕಡೆಯಿಂದ ಇಲ್ಲಿಗೆ ಬಂದಾಯಿತು. ಮಕ್ಕಳಿಗೂ ಹತ್ತಿರದ ಒಳ್ಳೆಯ ಶಾಲೆಯಲ್ಲಿ ಪ್ರವೇಶ ದೊರಕಿತು. ಸುಮುಹೂರ್ತದಲ್ಲಿ ಭೂಮಿಪೂಜೆ ಮಾಡಿ ಮನೆಯ ನಿರ್ಮಾಣ ಆರಂಭವಾಯಿತು. ಮನೆ ಕಟ್ಟುವ ಸಮಯದಲ್ಲಿ ವಾರಕ್ಕೆರಡು ಬಾರಿ ನೋಡಲು ಬರುವಾಗ, ಮರದಿಂದಾಗಿ ಮನೆ ಎಷ್ಟು ಚೆಂದ ಕಾಣಬಹುದು ಎಂದು ಯೋಚಿಸುತ್ತಿದ್ದೆ. ಸುಮಾರು ಹತ್ತು ಅಡಿ ಎತ್ತರದ, ಸಾಧಾರಣ ದಪ್ಪವಿದ್ದ, ಮೈತುಂಬಾ ಹಸಿರೆಲೆ ಹೊದ್ದಿರುವ ಮರದಲ್ಲಿ ಗೂಡು ಕಟ್ಟಿದ್ದ ಹಕ್ಕಿಗಳು ಆಗಾಗ ಬಂದು ಹೋಗುತ್ತಿದ್ದವು. ಮಕ್ಕಳಿಗೆ ಹಕ್ಕಿಗಳ ಪರಿಚಯವಾಗುತ್ತದೆ ಎಂದೆನ್ನಿಸಿತು. ಅಂತೂ ವರ್ಷದ ನಂತರ ಗೃಹಪ್ರವೇಶ ಮಾಡಿದ್ದಾಯಿತು. ಹೊಸ ಮನೆಯಾದ್ದರಿಂದ ಮನೆ ಮುಂದೆ ಇರುವ ಸ್ವಲ್ಪವೇ ಜಾಗದಲ್ಲಿ ಹಸಿರು ಹುಲ್ಲಿನ ಹಾಸನ್ನು (ಲಾನ್) ಹಾಕಿಸಿದೆವು. ವಿವಿಧ ರೀತಿಯ ಗಿಡಗಳನ್ನು ಕುಂಡಗಳಲ್ಲೂ, ಮತ್ತೆ ಕೆಲವನ್ನು ನೆಲದಲ್ಲೂ ನೆಡಲಾಯಿತು. ಆಹಾ! ಒಂದು ಮಿನಿ ಲಾಲ್‌ಬಾಗ್‌ನಂತಿತ್ತು ನಮ್ಮ ಕೈದೋಟ. ಕೆಲವು ತಿಂಗಳುಗಳವರೆಗೆ ಗಿಡಗಳೆಲ್ಲಾ ಚೆನ್ನಾಗಿಯೇ ಇದ್ದವು, ಹೂ ಬಿಡುವ ಗಿಡಗಳಲ್ಲಿ ಚೆನ್ನಾಗಿಯೇ ಹೂಗಳಾದವು. ಬರುಬರುತ್ತಾ ಗಿಡಗಳೆಲ್ಲಾ ಮುರುಟತೊಡಗಿದವು. ಹುಲ್ಲಿನ ಹಾಸನ್ನು ಇರುವೆಗಳು ತಿಂದು ಹಾಕಿದವು. ಮತ್ತೆ ಒಂದಷ್ಟು ದುಡ್ಡು ಖರ್ಚು ಮಾಡಿ ಹುಲ್ಲಿನ ಹಾಸನ್ನು ಹಾಕಿಸಿದೆವು. ಅದನ್ನು ಹಾಕಲು ಬಂದವನು,